ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ದಿನಾಂಕಃ 24.06.2024

**ಸಿ.ಸಿ.ನಂ. 693/ 2023**

ಪಿರ್ಯಾದುದಾರರುಃ ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ ಪೊಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿತರುಃ 1. ಮೊಹಮದ್ ಉಮ್ಮರ್

2. ಹಫ್ತಾಬ್ ?ಯಾನೆ ಮಹಮದ್ ಅಫ್ತಾಬ್

( ಮೊಹಮದ್ ?ಸಲ್ಮಾನ್ ? ಕಾನೂನು ಸಂಘರ್ಷ ಕ್ಕೊಳಗಾದ ಬಾಲಕ)

## ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ಸಿ.ವೀರಭದ್ರಯ್ಯ ಎಂ.ಎ., ಎಲ್‌ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ಆರೋಪಣೆ ಏನೆಂದರೆಃ

ದಿನಾಂಕಃ 24-04-2022 ರಂದು ಬೆಳಿಗ್ಗೆ 2.05 ರಿಂದ 2.25 ಗಂಟೆಯ ಸಮಯದಲ್ಲಿ ಗಂಟೆ ಸಮಯದಲ್ಲಿ, ಚಿಕ್ಕಮಗಳೂರು ನಗರ ಪೊಲೀಸ್ ಠಾಣಾ ವ್ಯಾಪ್ತಿಯ ನಲ್ಲೂರು ಗೇಟ್ ಬಳಿ ಹೆಚ್ ಪಿ ಪೆಟ್ರೋಲ್ ?ಬಂಕ್ ?ಹತ್ತಿರ ಆರೋಪಿತರಾದ ನೀವುಗಳು ಮತ್ತು ಕಾನೂನು ಸಂಘರ್ಷ ಕ್ಕೊಳಗಾದ ಸೇರಿಕೊಂಡು ಕೆಎಃ51 ಕ್ಯೂ 1730

ಪಲ್ಸರ್ ದ್ವಿಚಕ್ರ ವಾಹನದಲ್ಲಿ ಬಂದು ಚಾಸಾ2 ರವರು ಚಲಾಯಿಸಿಕೊಂಡು ಬರುತ್ತಿದ್ದ ಜಿಎ 05 ಎಫ್ 4294 ವ್ಯಾಗನ್ನಾರ್ ಕಾರನ್ನು ಅಡ್ಡ ಹಾಕಿ ನಿಲ್ಲಿಸಿ ಚಾಸಾಃ2 ರವರ ಕುತ್ತಿಗೆಯ ಹತ್ತಿರ ಚಾಕುವನ್ನು ಹಿಡಿದು , ಅವಾಚ್ಯ ಶಬ್ದಗಳಿಂದ ಬೈದು , ಅದೇ ಕಾರಿನಲ್ಲಿ ಕುಳಿತಿದ್ದ ಚಾಸಾಃ1 ರವರ ಮೊಬೈಲನ್ನು ಕಿತ್ತುಕೊಂಡು , ಚಾಸಾಃ2 ರವರನ್ನು ಹಿಡಿದುಕೊಂಡು ಅವರ ಶರ್ಟ್ ಜೋಬಿಗೆ ಕೈ ಹಾಕಿ ಹಣವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು , ಚಾಸಾಃ2 ರವರು ತನ್ನ ಬಲಗೈಯನ್ನು ಅವರ ಶರ್ಟ್ ಜೋಬಿನ ಬಳಿ ಹಿಡಿದುಕೊಂಡಿದ್ದು 1 ನೇ ಆರೋಪಿಯಾದ ನೀವು ಚಾಸಾಃ2 ರವರಿಗೆ ಚಾಕುವಿನಿಂದ ಬಲ ಹೆಬ್ಬೆರಳಿಗೆ ಹೊಡೆದು ಚಾಸಾಃ2 ರವರ ಕಾರಿನ ಕೀಯನ್ನು ಕಿತ್ತುಕೊಂಡು ಅವರಿಗೆ ಕೈಯಿಂದ ಹೊಡೆದು ಹಲ್ಲೆ ಮಾಡಿ ದರೋಡೆ ಮಾಡಿದ್ದು ಆದುದರಿಂದ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.394 ರ ಪ್ರಕಾರ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

sd

( ಸಿ.ವೀರಭದ್ರಯ್ಯ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.